ಆ ಬಿಕನಾಸಿಗಳು ಕೋಳಿಗಳಂತೆ ಫಕ್ಕನೆ ಎದ್ದು ಓಡಿ ಹೋಗುತ್ತಿರಲಿಲ್ಲ. ತಿವಿದೂ ತಿವಿದೂ ಎಬ್ಬಿಸಿ ಹೊರಗೆ ಗದುಮಬೇಕಿತ್ತು. ನಮ್ಮತ್ತೆ ಕೋಳಿಗಳ ಜೊತೆ ಲಾಭ ಜಾಸ್ತೀಂತ ಬಾತುಗಳನ್ನೂ ಸಾಕಿದ್ದರು. ಕೋಳಿಗಿಂತ ಮಾಂಸದಲ್ಲಿ ಜಾಸ್ತಿ ತೂಗುವ, ಗಜಗಾತ್ರದ ಮೊಟ್ಟೆ ಇಡುವ ಬಾತುಗಳನ್ನು ಸಾಕುವುದು ಫಜೀತಿ ಎನಿಸಿದರೂ ವರಮಾನದ ದೃಷ್ಟಿಯಿಂದ ಪೊಗದಸ್ತಾಗಿದ್ದವು. ಅತ್ತೆ ಸುರಂಗದಂಥ ಶೆಡ್ಡಿನ ಮನೆ ಮಾಡಿಸಿ, ನಡುವೆ ತಗಡಿನ ಗೋಡೆ ಸಿಕ್ಕಿಸಿ, ಎರಡು ಪೋಷನ್ನಿನ ಗೂಡುಗಳ ನಿರ್ಮಿಸಿದ್ದರು.

ಬದುಕುವ ರೀತಿ ರಿವಾಜುಗಳಲ್ಲಿ ಸಂಪೂರ್ಣ ವ್ಯತಿರಿಕ್ತವಾಗಿರುವ ಬಾತುಗಳು ಕೋಳಿಗಳೊಟ್ಟಿಗೆ ಒಂದೇ ಸೂರಿನಲ್ಲಿ ಅದೇಕೋ ವಾಸಮಾಡಲು ಇಷ್ಟಪಡುತ್ತಿರಲಿಲ್ಲ. ಜಾತಿ ಧರ್ಮದ ಸಮಸ್ಯೆಗಿಂತ ಪ್ರಕೃತಿ ರೂಪಿಸಿರುವ ವ್ಯತ್ಯಾಸಗಳೇ ಅವನ್ನು ದೂರ ಮಾಡಿದ್ದವು. ಈ ಸೂಕ್ಷ್ಮ ಅರಿಯದ ನಾನು ಒಮ್ಮೆ ಕೋಳಿ ಹಾಗೂ ಬಾತುಗಳ ಕೂಡಾವಳಿ ಮಾಡಲು ಹೋಗಿ ಎಡವಟ್ಟು ಮಾಡಿಬಿಟ್ಟೆ. ಒಟ್ಟಿಗೆ ಒಂದೇ ಗೂಡಿನೊಳಗೆ ಅಟ್ಟಿದರೆ ಏನಾಗಬಹುದೆಂದು ವಿಜ್ಞಾನಿಯತೆ ಪರೀಕ್ಷಿಸಲು ನೋಡಿದೆ. ಇದರಿಂದ ಆದ ಭಾರಿ ಅನಾಹುತದ ದೆಸೆಯಿಂದ ಅತ್ತೆ ಕಡೆಯಿಂದ ಸರಿಯಾಗಿ ಉಗಿಸಿಕೊಂಡು ಖರ್ಚಿಗೆ ಏಟನ್ನೂ ಬಳುವಳಿಯಾಗಿ ಪಡೆದೆ.

ಮಾತಿಗೆ ಮಾತು ಬೆಳೆದು ಪಿತ್ತವೇರಿಸಿಕೊಂಡು ನಿಂತ ಜಂಭದ ಕೋಳಿಗಳು ಬಿಂಕದ ಬಾತುಗಳೊಂದಿಗೆ ಜನಾಂಗೀಯ ಯುದ್ಧಕ್ಕೆ ನಿಂತವು. ತನ್ನ ಚೂಪು ಚಮಚದಂಥ ಮೂತಿಯಿಂದಲೇ ಕೋಳಿಗಳ ರೆಕ್ಕೆ ಪುಕ್ಕಗಳನ್ನೆಲ್ಲಾ ಎರ್ರಾಬಿರ್ರಿ ಕಿತ್ತು ಬಿಸಾಡಿದವು. ನೋಡಲು ಅಮಾಯಕರಂತೆ ಕಾಣುವ ಬಾತುಕೋಳಿಗಳು ಈ ಮಟ್ಟಿನ ಹರಾಮ್ ಖೋರ್‌ಗಳೆಂಬುದು ನನಗೂ ಅವತ್ತೇ ತಿಳಿದಿದ್ದು. ಕೆಸರು ತಿಂದು ಬೆಳೆಯುತ್ತಿರುವ ಬುದ್ಧಿಗೇಡಿಗಳೆಂದು ಅವನ್ನು ಭಾವಿಸಿದ್ದೇ ತಪ್ಪಾಯಿತು. ಕೋಳಿಗಳ ಮೇಲೆ ಭಾರಿ ಗೆರಿಲ್ಲಾ ದಾಳಿಯನ್ನೇ ಮಾಡಿದ್ದವು. ಪುಕ್ಕಾಪಹರಣಕ್ಕೆ ತುತ್ತಾಗಿದ್ದ ಕೋಳಿಗಳು ಬಾತುಗಳ ರೌಡಿಸಂಗೆ ನಲುಗಿ ಹೋಗಿದ್ದವು. ಪೊಲೀಸ್ ಸ್ಟೇಷನ್ನಿನಲ್ಲಿ ರುಬ್ಬಿಸಿಕೊಂಡವರಂತೆ ಜೋಲುಮೋರೆ ಹಾಕಿಕೊಂಡು ಮೂಲೆ ಹಿಡಿದು ನಿಂತಿದ್ದವು. ಕೋಳಿಗಳ ಮೈಮೇಲಿನ ಕಲರ್ ಪುಕ್ಕಗಳೆಲ್ಲಾ ಚಿಂದಿ ಚಿತ್ರಾನ್ನವಾಗಿದ್ದವು. ಜಂಭ ಕಕ್ಕುವ ಹುಂಜಪ್ಪನೂ ಗರಬಡಿದು ಅವಮಾನದಿಂದ ನಿಂತಿದ್ದನು.

ಕೋಳಿಗಳೂ ಒಮ್ಮೊಮ್ಮೆ ಹೀಗೆ ಕಿತ್ತಾಡಿಕೊಳ್ಳುವುದುಂಟು. ಆಗ ಯಜಮಾನ ಹುಂಜಪ್ಪ ಎಲ್ಲರಿಗೂ ಬೈದು, ಕೆಲವರನ್ನು ಕುಕ್ಕಿ ಸಮಾಧಾನ ಹೇಳುವುದು ರೂಢಿ. ಆದರಿಲ್ಲಿ ನನ್ನ ಮಿಲನ ಸಮಾವೇಶ ಯಶಸ್ವಿಯಾಗುವ ಬದಲು ತಲೆಬಿಸಿಯಾಗಿತ್ತು. "ಏಯ್ ದಲಿಂದರ್, ನಿಂಗೆ ಇವನ್ನೆಲ್ಲಾ ಬೇರೆ ಬೇರೆ ಕವುಚಿ ಹಾಕ್ಬೇಕು ಅನ್ನೋದು ಗೊತ್ತಿಲ್ಲವೇನೋ ಊದುಗೊಪ್ಪೆ. ಮೊದ್ಲೆ ಅವುನ್ ಕಂಡ್ರೆ ಇವುಕ್ಕಾಗಲ್ಲ. ಬದಖ್ ಮುರ್ಗಿ ನಡುವೆ ನೆಂಟಸ್ತನ ಮಾಡ್ಸೋಕೆ ನಿಂಗ್ಯಾರೋ ಚೋದಿಕೆ ಹೇಳಿದ್ದು. ನೋಡಲ್ಲಿ ಬಾತು ಹೆಂಗೆ ಮುರ್ಗಿ ಪುಕ್ಕ ಕಿತ್ತು ಕೆಡಿವಿದೆ" ಎಂದು ಅತ್ತೆ ಅತ್ಯಾಚಾರಕ್ಕೆ ತುತ್ತಾಗಿದ್ದ ಕೋಳಿಯನ್ನು ಹಿಡಿದು ತೋರಿಸಿದರು.

ಐನಾತಿ ಬಾತು ಮೊಟ್ಟೆ ಇಡುವ ಕೋಳಿಯ ಪುಷ್ಠ ಭಾಗವನ್ನೇ ಕಚ್ಚಿ ಹಿಡಿದು ಸಿಕ್ಕಾಪಟ್ಟೆ ಎಳೆದು ಹಾಕಿತ್ತು. ಲಾಲಿಪಪ್ಪಿನಂತೆ ಕೆಂಪಗೆ ಕಾಣುವ ಅದರ ಗೌಪ್ಯಭಾಗವನ್ನೇ ಬಾಯಲ್ಲಿ ಸಿಕ್ಕಿಸಿಕೊಂಡು ಎಳೆದಾಡಿ ಜಖಂ ಮಾಡಿತ್ತು. ರಕ್ತ ಸೋರುತ್ತಿದ್ದ ಆ ಸೂಕ್ಷ್ಮ ಜಾಗಕ್ಕೆ ಅತ್ತೆ ಅರಿಸಿನಪುಡಿ ತರಿಸಿ ಹಚ್ಚಿಸಿದರು. ನೋವಿನಲ್ಲಿದ್ದ ತತ್ತಿಕೋಳಿ ಪಾಪ ಕೊಸರಾಡುತ್ತಿತ್ತು. ಇಂಥ ಹರಾಮಿ ಕೆಲಸ ಮಾಡಿದ ಬಾತು ಮಾತ್ರ ರೌಡಿ ವರ್ಚಸ್ಸಿನಲ್ಲೇ ಕೆಂಗಣ್ಣು ಹುರಿ ಮಾಡಿಕೊಂಡು ನಿಂತಿತ್ತು.